


# ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

# 75ನೇ ಗಣರಾಜ್ಯೋತ್ಸವ ಕಾರ್ಯಕ್ರಮ

## ಧ್ವಜಾರೋಹಣ

**ಪ್ರೊ. ಕವಿತಾ ರೈ**
ನಿರ್ದೇಶಕರು, ಅಕ್ಕ ಮಹಾದೇವಿ ಸಂಶೋಧನಾ ಪೀಠ
ಕ.ರಾ.ಮು.ವಿ, ಮುಕ್ತ ಗಂಗೋತ್ರಿ, ಮೈಸೂರು.

## ಅಧ್ಯಕ್ಷತೆ

**ಶ್ರೀ. ಶ್ರೀಶೈಲರಾಮಣ್ಣವರ್**
ಗೌ|| ಕೋಶಾಧ್ಯಕ್ಷರು
ವಿದ್ಯಾವರ್ಧಕ ಸಂಘ(ರಿ) ಮೈಸೂರು

## ಮುಖ್ಯ ಅತಿಥಿಗಳು

**ಶ್ರೀ. ಶಿವಲಿಂಗಯ್ಯ ಎಸ್**
ಆಡಳಿತ ಮಂಡಳಿ ಸದಸ್ಯರು
ವಿದ್ಯಾವರ್ಧಕ ಸಂಘ(ರಿ) ಮೈಸೂರು

## ಉಪಸ್ಥಿತರು

**ಡಾ.ಎಸ್.ಮರೀಗೌಡ**
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

**ಡಾ. ದೀಪು**
ಪ್ರಾಂಶುಪಾಲರು
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

**ಕು. ಚಂಪಕ ಎನ್**
ಪ್ರಾಂಶುಪಾಲರು
ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜು, ಮೈಸೂರು

**ಶ್ರೀ. ಸುರೇಶ.ಕೆ.ಎಂ**
ಉಪ ಪ್ರಾಂಶುಪಾಲರು
ವಿದ್ಯಾವರ್ಧಕ ಸಂಯುಕ್ತ ಪದವಿ ಪೂರ್ವ ಕಾಲೇಜು
(ಪ್ರೌಢಶಾಲೆ ವಿಭಾಗ) ಮೈಸೂರು

# ಸರ್ವರಿಗೂ ಸುಸ್ವಾಗತ

ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ
ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿ ಸಮುದಾಯ

**ದಿನಾಂಕ:26.01.2024ನೇ ಶುಕ್ರವಾರ** **ಸಮಯ: ಬೆಳಗ್ಗೆ 7.30 ಗಂಟೆಗೆ**

**ಸ್ಥಳ: ಬಯಲು ರಂಗಮಂದಿರ**
ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು

ದೇಶಭಕ್ತಿ ಆತ್ಮಾಹುತಿಯನ್ನು ಕೊಡುವ ಔನತ್ಯವನ್ನು ಹೊಂದಿದ್ದು ತ್ಯಾಗ ಮತ್ತು ಬಲಿದಾನಗಳಿಂದ ಪರಿವರ್ತನೆ ಸಾಧ್ಯವಾಯಿತು. ಇಂತಹ ಬಲಿದಾನಗಳಷ್ಟೇ ಅಲ್ಲದೇ ಸಂಪೂರ್ಣ ಸ್ವರಾಜ್ಯದ ಕಲ್ಪನೆಯಲ್ಲಿ ಜೈಲು ಪಾಲಾದ ದೇಶಪ್ರೇಮಿಗಳ ತ್ಯಾಗದ ಪ್ರತಿಫಲವೇ ಸ್ವಾತಂತ್ರ್ಯ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕ ಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾ ರೈ ಅವರು ಅಭಿಪ್ರಾಯಿಸಿದರು.

ನಗರದ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ವತಿಯಿಂದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣವನ್ನು ನೆರವೇರಿಸಿ, ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿ ಎನ್.ಸಿ.ಸಿ ಕೆಡೆಟ್‌ಗಳಿಂದ ಗೌರವ ವಂದನೆಯನ್ನು ಸ್ವೀಕರಿಸಿ ಗಣರಾಜ್ಯೋತ್ಸವದ ಕುರಿತು ಮಾತನಾಡುತ್ತಾ ಭಾರತೀಯರು ಪರಕೀಯರ ದಬ್ಬಾಳಿಕೆಗೆ ಒಳಗಾಗಿ ದಾಸ್ಯ ಜೀವನ ನಡೆಸಿದರ ಬಗ್ಗೆ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಹಲವಾರು ಘಟನಾವಳಿಗಳನ್ನು ನೆನಪು ಮಾಡಿ ದೇಶ ಭಕ್ತರ ಬಲಿದಾನಗಳನ್ನು ಸ್ಮರಿಸಿದರು.

ಬೆಂಗಳೂರಿನಂತಹ ಬೃಹತ್ ನಗರಗಳಲ್ಲಿ ಇಂದಿನ ಯುವ ಜನ ಕಂಪನಿಗಳಲ್ಲಿ ಗಾಣದ ಎತ್ತುಗಳಂತೆ ದುಡಿದು ವಾರಾಂತ್ಯದಲ್ಲಿ ಮೋಜು ಮಸ್ತಿಯಲ್ಲಿ ತೊಡಗಿಸಿಕೊಂಡು ಜೀವನವನ್ನು ಸವೆಸುತ್ತಿದ್ದಾರೆ. ಇಂದಿನ ಯುವಶಕ್ತಿಯು ದೇಶಪ್ರೇಮ, ದೇಶ ರಕ್ಷಣೆಯ ಬಗ್ಗೆ ಯೋಚನೆ ಮಾಡದೇ ಇರುವುದು ದುಃಖಕರ ಸಂಗತಿಯಾಗಿದೆ. ಸಂವಿಧಾನದ ಅಂಗೀಕಾರದ ನೆಲೆಗಟ್ಟಿನಲ್ಲಿ ನಾವು ಗಣತಂತ್ರದ ದಿನವನ್ನು ಅರ್ಥಪೂರ್ಣವಾಗಿ ದೇಶದೆಲ್ಲಡೆ ಆಚರಿಸಲಾಗುತ್ತಿದೆ. ಆಚರಣಾತ್ಮಕ ಕಾನೂನು, ಅಧಿಕಾರ ವಿಕೇಂದ್ರೀಕರಣ, ಸಾಮಾಜಿಕ ನ್ಯಾಯವನ್ನು ಭಿತ್ತರಿಸುವ ಧ್ಯೇಯೋದ್ಧೇಶಗಳನ್ನು ನಮ್ಮ ಸಂವಿಧಾನ ಹೊಂದಿದೆ. ಅಂತಹ ಸಂವಿಧಾನವನ್ನು ಅಂಗೀಕರಿಸಿದ ದಿನದಂದೇ ನಮಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದ್ದು ಎಂದು ಅಭಿಪ್ರಾಯಪಟ್ಟು ವಿದ್ಯಾರ್ಥಿಗಳಿಗೆ "ಬಲಿ ಕೊಡುವುದು ಹುಲಿಯನ್ನಲ್ಲ, ಕುರಿಯನ್ನು ಮಾತ್ರ. ಹಾಗೇ ಸಮಾಜದಲ್ಲಿ ನಾವು ಹುಲಿಗಳಂತೆ ಬದುಕಬೇಕೇ ಹೊರತು ಕುರಿಗಳಂತೆ ಎಲ್ಲವನ್ನೂ ಸಹಿಸಿಕೊಂಡು ಹೋಗದೇ, ಅನ್ಯಾಯವಾದಾಗ ಧ್ವನಿ ಎತ್ತಿ ಸ್ವಸ್ಥ ಹಾಗೂ ಸಮಸಮಾಜ ಮತ್ತು ಜಾತ್ಯಾತೀತ ಸಮಾಜದ ನಿರ್ಮಾಣಕ್ಕೆ ಕೈ ಜೋಡಿಸಬೇಕು" ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ದೇಶಭಕ್ತಿ ಗೀತೆ, ನಾಡಗೀತೆ, ಜಯ ಘೋಷ, ಸಮನ್ವಯತೆ ಸಾಮರಸ್ಯವನ್ನು ಭಿತ್ತುವ ಗೀತೆಗಳನ್ನು ಹಾಡಿದರು. ವಿದ್ಯಾವರ್ಧಕ ಸಂಘದ ಗೌ॥ ಕೋಶಾಧ್ಯಕ್ಷರಾದ ಶ್ರೀ.ಶ್ರೀಶೈಲರಾಮಣ್ಣವರ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ.ಶಿವಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾರ್ಯಕ್ರಮವನ್ನು ಮಹದೇವಸ್ವಾಮಿ.ಪಿ ಸ್ವಾಗತಿಸಿ, ಪ್ರೊ.ಪಲ್ಲವಿ ಅತಿಥಿಗಳನ್ನು ಪರಿಚಯಿಸಿದರು. ಡಾ.ಎಸ್.ಮರೀಗೌಡ, ಡಾ.ದೀಪು, ಕು.ಚಂಪಕ, ಶ್ರೀ.ಸುರೇಶ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಡಾ.ರಘು.ಬಿ.ಟಿ ನಿರೂಪಿಸಿ ಪ್ರೊ.ಇಂದುಮತಿ ವಂದಿಸಿದರು.


















ರಂಗ ಮಂಟಪ


ರಂಗ ಮಂಟಪ


ರಂಗ ಮಂಟಪ




PARKING












NSS OFFICE































